ಆಫೀಸಿನಿಂದ ಫೋನ್ ಬಂದಿತು, 'ಸಾಹೇಬರು ಕರೆಯುತ್ತಿದ್ದಾರೆ, ತಕ್ಷಣ ಬರಬೇಕಂತೆ...' ಈ ರೀತಿ ಆಗುವುದೆಂದು ಮೊದಲೇ ಊಹಿಸಿದ್ದ ಶಿವಣ್ಣ. ತಕ್ಷಣ ಹೊರಟ. ತನ್ನ ಸ್ಟೇಷನ್ ಡೈರಿಯಲ್ಲಿ ಯಾಕೆ, ಎಲ್ಲಿಗೆ ಹೋಗುತ್ತಿದ್ದೇನೆ ಎಂಬುದನ್ನು ನಮೂದಿಸಲು ಮರೆಯಲಿಲ್ಲ.

ಸುಮಾರು ಅರ್ಧ ಗಂಟೆ ಕಾದ ನಂತರ ಗೃಹ ಕಾರ್ಯದರ್ಶಿ ಜಗದೀಶಚಂದ್ರ ಹೊರಬಂದು, "ಸಾರಿ ಶಿವಣ್ಣ... ಕಾಯಿಸಿಬಿಟ್ಟೆ... ಮನೆಗೆ ಹೊರಟಿದ್ದೇನೆ... ಜೊತೆಗೆ ಬನ್ನಿ ಮಾತಾಡೋಣ" ಎಂದರು. ಯಾವ ಪ್ರಶ್ನೆಯನ್ನೂ ಹಾಕದೆ ಅವರೊಂದಿಗೆ ಕಾರನ್ನೇರಿದ.

"ಏನು ನೀವು ಮತ್ತೆ ಗಂಗಾಧರ ಇಬ್ಬರೂ ಮತ್ತೆ ನಮ್ಮ ಡ್ರೈವರ್ ಕೇಸ್‌ನಲ್ಲಿ ತನಿಖೆ ಮಾಡ್ತಾ ಇದ್ದೀರಂತೆ'' ಎಂದು ನನಗೆಲ್ಲ ತಿಳಿದಿದೆ ಎಂಬಂತೆ ವ್ಯಂಗ್ಯವಾಗಿ ನುಡಿದರು.

"ಹೌದು ಸಾರ್, ನಮಗೆ ಆ ಕೇಸ್‌ನಲ್ಲಿ ಎಲ್ಲಾ ಗೋಜಲುಮಯವಾಗಿದೆ, ಎಲ್ಲಿಯೋ ಒಂದು ಮಿಸ್ಸಿಂಗ್‌ಲಿಂಕ್ ಇದೆ ಎಂದು ಅನ್ನಿಸಿತ್ತು. ಎಲ್ಲ ಘಟನೆಗಳು ಒಟ್ಟಾಗಿ ನೋಡಿದರೆ ಏನೂ ಇಲ್ಲ... ಆದರೆ ಬಿಡಿಬಿಡಿಯಾಗಿ ನೋಡಿದರೆ ತಾಳೆಯಾಗದ ಸತ್ಯ ಇದೆ. ಅದಕ್ಕೆ ಸಾರ್."

"ಆ ಸಿಡಿ ನಕಲಿ ಅಲ್ಲ ಎಂಬುದು ನಿಮಗೂ ಗೊತ್ತು. ಅದು ಆ ಡ್ರೈವರ್ ಹೇಳಿದಂತೆ ಅದು ಬೇರೆ ಎಲ್ಲೋ ತೆಗೆದಿದ್ದು ಅಲ್ಲ... ನಿಮ್ಮ ಅಥವಾ ನಿಮ್ಮ ಸ್ನೇಹಿತನ ಫಾರಂ ಹೌಸ್‌ನಲ್ಲಿಯೇ ತೆಗೆದಿದ್ದು ಎಂದೂ ನನಗೆ ಗೊತ್ತು. ನನ್ನ ಪ್ರಶ್ನೆ ಅದಲ್ಲ, ನಿಮ್ಮ ಮನೆಯ ಕಾರಿನ ಡ್ರೈವರ್‌ಗೆ ಅಲ್ಲಿ ಆ ದಿನ ಅಂದರೆ ಆ ಸಿಡಿ ಮಾಡಿದ ದಿನ ಅದೇ ಸಮಯದಲ್ಲಿ ಆ ಕೃತ್ಯ ನಡೆಯಲಿದೆ ಎಂದು ಹೇಗೆ ಗೊತ್ತಾಯಿತು? ಅಕಸ್ಮಾತ್ ತಿಳಿದಿದ್ದರೂ ಅದಕ್ಕೂ ಮುಂಚಿತವಾಗಿ ಅಷ್ಟು ಬಿಗಿ ಸೆಕ್ಯುರಿಟಿ ಇರುವ ಜಾಗದಲ್ಲಿ ಯಾರಿಗೂ ತಿಳಿಯದಂತೆ ಅಲ್ಲಿ ಕ್ಯಾಮರಾ ಸೆಟ್ ಮಾಡಿ ಮತ್ತೆ ಅದನ್ನು ಅಲ್ಲಿಂದ ಸಾಗಿಸಲು ಹೇಗೆ ಸಾಧ್ಯ... ಅಂದರೆ ಅಲ್ಲಿ ಅದು ಅದೊಂದೇ ದಿನ ನಡೆದ ಘಟನೆ ಅಲ್ಲ. ಬಹುಶಃ ಅಲ್ಲಿ ಯಾವಾಗಲೂ ನಡೆಯುತ್ತಿರುವ ಘಟನೆ ಇರಬೇಕಲ್ಲವಾ ಸಾರ್.''

ಜಗದೀಶಚಂದ್ರ ಮಾತಾಡಲಿಲ್ಲ.

"ಸರ್, ಪೊಲೀಸ್ ಇಲಾಖೆ, ಗುಪ್ತಚರ ಇಲಾಖೆ ಎರಡೂ ನಿಮ್ಮ ಕೈಯಲ್ಲಿಯೇ ಇವೆ. ಅಂಥದರಲ್ಲಿ ನಿಮ್ಮಂಥವರನ್ನು ಬ್ಲಾಕ್‌ಮೇಲ್ ಮಾಡಲು ಒಬ್ಬ ಯಃಕಶ್ಚಿತ್ ಡ್ರೈವರ್‌ಗೆ ಹೇಗೆ ಸಾಧ್ಯ... ನಾವೆಲ್ಲ ಅಂದುಕೊಂಡಂತೆ ಅವನೊಬ್ಬನೇ ಇದರಲ್ಲಿ ಇಲ್ಲ ಅನ್ನಿಸುತ್ತಿದೆ. ಇಂಥಾ ವಿಚಾರದಲ್ಲಿ ಎಲ್ಲರೂ ಗೌಪ್ಯತೆ ಕಾಪಾಡಿಕೊಳ್ಳಲು ಬಯಸಿದರೆ ತಾವು ಪಬ್ಲಿಕ್ ಆಗಿ ಬಂದು ಠಾಣೆಯಲ್ಲಿ ಕಂಪ್ಲೇಂಟ್ ಕೊಟ್ಟಿರಿ ಹಾಗೂ ನಿಮ್ಮ ಸಹಚರಿಂದಲೇ ತಾವೇ ಎಲ್ಲ ನ್ಯೂಸ್ ಚಾನೆಲ್‌ಗಳಿಗೂ ಫೋನ್ ಮಾಡಿಸಿ ತಾವು ಸುಬ್ರಮಣ್ಯಪುರ ಪೊಲೀಸ್ ಸ್ಟೇಷನ್‌ಗೆ ಬರುವ ಸುದ್ದಿ ತಲುಪಿಸಿ ನಿಮ್ಮ ಡ್ರೈವರ್ರೇ ನಿಮ್ಮನ್ನು ಬ್ಲಾಕ್‌ಮೇಲ್ ಮಾಡುತ್ತಿದ್ದಾನೆ ಎಂದು ಬಿಂಬಿಸಿದಿರಿ.''

"ಸ್ಟಾಪಿಟ್..." ಜಗದೀಶಚಂದ್ರ ಕೂಗಿದರು.

''ಮನಸ್ಸಿಗೆ ಬಂದಂತೆ ಮಾತಾಡಬೇಡ... ಅದೇನು ಹೊಸ ಲೀಡ್ ಅಂದೆಯೋ ಅದನ್ನು ಬೊಗಳಿ ತೊಲಗು ಇಲ್ಲಿಂದ..."

ಅವರ ಆರ್ಭಟಕ್ಕೆ ಹೆದರಿ ಡ್ರೈವರ್ ಕಾರು ತಕ್ಷಣ ಬ್ರೇಕ್ ಹಾಕಿದ.

ಶಿವಣ್ಣ ಶಾಂತ ಚಿತ್ತನಾಗಿ, "ಸರ್, ಸಾಮಾನ್ಯವಾಗಿ ಇಂಥಾ ಕೇಸ್‌ಗಳನ್ನು ಸದ್ದಿಲ್ಲದೆ ಮುಗಿಸಬಹುದು. ಆದರೆ ನೀವೇ ಸ್ವತಃ ಬಹಿರಂಗಗೊಳಿಸಿದ್ದರ ಹಿಂದಿನ ಉದ್ದೇಶ ಏನು? ನನಗೆ ಅನುಮಾನ ಬಲವಾಗಿದ್ದು ಓಡಿಹೋಗಿದ್ದ ನಿಮ್ಮ ಡ್ರೈವರ್‌ನಿಂದ. ವಿಚಾರ ಈ ರೀತಿ ಬಹಿರಂಗಗೊಂಡರೂ... ನಿಮಗೆ ಮತ್ತೆ ಫೋನ್ ಮಾಡಿ ಬೆದರಿಕೆ ಹಾಕಿದ್ದು... ಈ ರೀತಿಯ